ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,

ಕುಂದಾಪುರ

ಸಿ.ಸಿ. ನಂಬ್ರಃ 1603/2018

ಚಾಸಾಃ 8 ಪ್ರಾಸಾಃ9

ದಿನಾಂಕಃ 23.10.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಂಜಪ್ಪ |
| ತಂದೆಯ ಹೆಸರು | : | ಬಾಳಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಪೊಲೀಸ್ ಉಪ ನಿರೀಕ್ಷಕರು |
| ವಾಸ ಸ್ಥಳ | : | ದಾವಣಗೆರೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು 2014 ಜುಲೈ ತಿಂಗಳಿನಿಂದ 2018 ಫೆಬ್ರವರಿಯವರೆಗೆ ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25-12-2017 ರಂದು ನಾನು ಮತ್ತು ಚಾಸಾ-9ರವರ ಜೊತೆಗೆ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯ ಶಿರಾಲಿ ಚೆಕ್ ಪೋಸ್ಟ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಳಿಗ್ಗೆ ಸುಮಾರು 10 ಗಂಟೆಗೆ ಹೊನ್ನವಾರ ಕಡೆಯಿಂದ ಭಟ್ಕಳ ಕಡೆಗೆ ಒಂದು swift ಗಾಡಿ ಬರುತ್ತಿದ್ದು ಅದನ್ನು ನಿಲ್ಲಿಸುವಂತೆ ಕೈ ಸನ್ನೆ ಮಾಡಿದ್ದು, ಗಾಡಿಯಲ್ಲಿ ಇದ್ದವರು

ಸ್ವಲ್ಪ ಮುಂದೆ ಹೋಗಿ ನಿಲ್ಲಿಸಿ ವಾಹನದಲ್ಲಿ ಇದ್ದ 4 ಜನರು ಓಡಲು ಪ್ರಾರಂಭಿಸಿರುತ್ತಾರೆ. ನಂತರ ನನ್ನ ಜೊತೆಗೆ ಒಬ್ಬ ವ್ಯಕ್ತಿಯನ್ನು ಹಿಡಿದಿದ್ದು ಆತ ತಂದಿದ್ದ ಕಾರಿನ ಕಾಗದ ಪತ್ರಗಳನ್ನು ಕೇಳಿದಾಗ ಅವನು ಕಾಗದವನ್ನು ತೋರಿಸಿರುವುದಿಲ್ಲ. ಅವರನ್ನು ವಿಚಾರಿಸಿ ಕೇಳಿದಾಗ ಕುಂದಾಪುರದ ಕಡೆಯಿಂದ ಕಳ್ಳತನ ಮಾಡಿ ತನ್ನ ವಾಹನವೆಂದು ತಿಳಿಸಿದ್ದು, ಸದ್ರಿ ವ್ಯಕ್ತಿಯ ಹೆಸರು ಕೃಷ್ಣ ಈಶ್ವರ ಆಚಾರ್ಯ ಎಂದು ತಿಳಿಸಿರುತ್ತಾರೆ. ನಂತರ ನಾನು ಆರೋಪಿ ಮತ್ತು ಕಾರನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಮುಂದಿನ ವಿಚಾರಣೆಗಾಗಿ ಹಾಜರುಪಡಿಸಿರುತ್ತಾರೆ. ಸದ್ರಿ ವಾಹನದ ಸಂಖ್ಯೆ ಕೆಎ-51-ಎನ್-1122 ಮಾರುತಿ ಸುಜುಕಿ Swift desire ಆಗಿರುತ್ತದೆ. ಅನಂತರ ಸದ್ರಿ ವ್ಯಕ್ತಿಯನ್ನು ಕಾರಿನೊಂದಿಗೆ ಸಿಬ್ಬಂದಿಗಳ ಸಹಾಯದೊಂದಿಗೆ ಚಾಸಾ-10ರವರ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿ 1ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ನಿಪಿ-4ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಎಂ ಐ ರವರಿಂದಃ</u>**

ಮೇಲೆ ಹೇಳಿದ ದಿನ ಎಷ್ಟು ವಾಹನಗಳನ್ನು ತಪಾಸಣೆ ಮಾಡಿದ್ದೇವೆ ಎಂದು ನೆನಪಿಲ್ಲ. ಈ ವಾಹನವನ್ನು ಬಿಟ್ಟು ಬೇರೆ ವಾಹನಗಳನ್ನು ಸುಮಾರು ಅರ್ಧ ಗಂಟೆ ತಪಾಸಣೆ ಮಾಡಿರುತ್ತೇವೆ. ಸದ್ರಿ ದಿನ ನಾನು ಠಾಣೆಯಿಂದ 9-30ಕ್ಕೆ ಹೊರಟಿರುತ್ತೇನೆ. ಅದರ ಮಧ್ಯೆ ಬೇರೆ ಎಲ್ಲೂ ಹೋಗಿಲ್ಲ. ನಮ್ಮ ಠಾಣೆ ಮತ್ತು ಸದ್ರಿ ಸ್ಥಳದ ಮಧ್ಯದಲ್ಲಿ ಬೇರೆ ಯಾವುದೇ ಪಾಯಿಂಟ್ ಇಲ್ಲ. ಠಾಣೆಯಿಂದ ಸದ್ರಿ ಸ್ಥಳಕ್ಕೆ 5 ನಿಮಿಷದಲ್ಲಿ ತಲುಪಿರುತ್ತೇವೆ. ವಾಹನವನ್ನು ನಾನು ಮತ್ತು ಚಾಸಾ-9ರವರು ತಡೆದು ನಿಲ್ಲಿಸಿ ತಪಾಸಣೆ ಮಾಡಿರುತ್ತೇವೆ.

ಸದ್ರಿ ಸ್ಥಳದಲ್ಲಿ ಗೇಟು ಇದೆ ಎಂದರೆ ಸರಿ. ಬ್ಯಾರಿಕೇಡಿನ ಸುಮಾರು 15 ಅಡಿ ಹಿಂದೆ ವಾಹನವನ್ನು ನಿಲ್ಲಿಸಿರುತ್ತಾರೆ. ವಾಹನವನ್ನು ನಿಲ್ಲಿಸಿದ ತಕ್ಷಣ ಅದರಲ್ಲಿ ಇದ್ದ ವ್ಯಕ್ತಿಗಳು ಓಡಲು ಪ್ರಾರಂಭಿಸಿದ್ದು ಒಬ್ಬ ಮಾತ್ರ ಸಿಕ್ಕಿರುತ್ತಾರೆ. 1ನೇ ಆರೋಪಿ ಬ್ಯಾರಿಕೇಡಿನ ಹಿಂಬದಿಯಿಂದ ಓಡಲು ಪ್ರಾರಂಭಿಸಿರುತ್ತಾರೆ. ಸುಮಾರು 10 ಅಡಿ ದೂರದಲ್ಲಿ ಆತನನ್ನು ಹಿಡಿದಿರುತ್ತೇವೆ. ನಾನು ಮತ್ತು ಚಾಸಾ-9ರವರು ಜೊತೆಯಾಗಿ ಆತನನ್ನು ಹಿಡಿದಿರುತ್ತೇವೆ. ಉಳಿದ ಆರೋಪಿತರು ಹಿಂದಕ್ಕೆ ಓಡಿ ಹೋಗಿರುತ್ತಾರೆ. ಅವರು ಯಾರೂ ಮುಖವನ್ನು ಮರೆ ಮಾಡಿರುವುದಿಲ್ಲ. ಅವರುಗಳನ್ನು ಆಗ ಹಿಡಿಯಲು ಪ್ರಯತ್ನಿಸಿಲ್ಲ. ತಕ್ಷೀರಿನ ಬಗ್ಗೆ ಯಾವುದೇ ಪೂರ್ವ ಮಾಹಿತಿ ಇರಲಿಲ್ಲ.

ಸದ್ರಿ ದಿನ ಆರೋಪಿ ವಾಹನದ ಯಾವ ಭಾಗದಲ್ಲಿ ಕುಳಿತಿದ್ದ ಎಂದು ನೆನಪಿಲ್ಲ. ಆ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ಹೇಳಲಾಗುವುದಿಲ್ಲ. ಸದ್ರಿ ಸ್ಥಳದಿಂದ ಶಿರಾಲಿ ಜಂಕ್ಷನ್ 1 ಕಿ.ಮೀ ದೂರವಿದೆ. ಠಾಣೆಯಿಂದ ತಕ್ಷೀರು ಸ್ಥಳ ಸುಮಾರು 4 ರಿಂದ 5 ಕಿ.ಮೀ ದೂರವಿರುತ್ತದೆ. ಸದ್ರಿ ಸ್ಥಳದಲ್ಲಿ ಆರೋಪಿ ಮತ್ತು ವಾಹನ ಹಿಡಿದ ಬಗ್ಗೆ ಪಂಚನಾಮೆ ಜರುಗಿಸಲು ಯಾವುದೇ ತೊಂದರೆ ಇರಲಿಲ್ಲ. ಅದು ರಾ.ಹೆದ್ದಾರಿಯಾಗಿದ್ದು ಜನ ನಿಭಿಡ ಸ್ಥಳ ಎಂದರೆ ಸರಿ. ಅಕ್ಕಪಕ್ಕದಲ್ಲಿ ಅಂಗಡಿಗಳು ಇವೆ ಎಂದರೆ ಸರಿ.

ಚಾಸಾ-10ರವರು ವಿಚಾರಣೆ ಮಾಡಿದ ವೇಳೆಗೆ ಸ್ಥಳೀಯರನ್ನು ವಿಚಾರಿಸಿದ ಬಗ್ಗೆ ನನಗೆ ತಿಳಿದಿಲ್ಲ. ಸ್ಥಳದಲ್ಲಿ ಅಂಗಡಿ ಮುಂಗಟ್ಟುಗಳು ಇದ್ದ ಬಗ್ಗೆ ನಾನು ಚಾಸಾ-10ರವರಿಗೆ ತಿಳಿಸಿಲ್ಲ. ಸದ್ರಿ ದಿನ ನಾನು ಚೆಕ್ ಪೋಸ್ಟ್ ಗೆ ಹೋಗಿದ್ದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇನೆ. ಅದನ್ನು ನನ್ನ ಮೇಲಾಧಿಕಾರಿಯವರು ಪಡೆದುಕೊಂಡಿದ್ದ ಬಗ್ಗೆ ನನಗೆ ತಿಳಿದಿಲ್ಲ. ಎಷ್ಟು ದಿನಗಳ ಮೊದಲು ಸದ್ರಿ ವಾಹನವನ್ನು ಆರೋಪಿತರು ಎಲ್ಲಿ ಕಳ್ಳತನ

ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಓಡಿ ಹೋದ ಆರೋಪಿತರ ಬಗ್ಗೆ ಯಾವುದೇ ತನಿಖೆ ಮಾಡಿಲ್ಲ.

ಆರೋಪಿತರ ಕೈಯಿಂದ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಮಾಲಿನೊಂದಿಗೆ ನಮಗೆ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ವಶಕ್ಕೆ ಪಡೆದ ಬಗ್ಗೆ ಆತನ ಕುಟಂಬಸ್ಥರಿಗೆ ನಾನು ಮಾಹಿತಿ ನೀಡಿಲ್ಲ. ಚಾಸಾ-10ರವರು ಮಾಹಿತಿ ಕೊಟ್ಟ ಬಗ್ಗೆ ನನಗೆ ತಿಳಿದಿಲ್ಲ. ಯಾವುದೋ ವ್ಯಕ್ತಿಯನ್ನು ಸಿಲುಕಿಸಿ ಆತನ ವಿರುದ್ದ ಈ ಪ್ರಕರಣವನ್ನು ದಾಖಲಿಸಿ ಅಪಾದಿತನನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತನಿಖೆಗೆ ಬಾಕಿ ಇದ್ದ ಪ್ರಕರಣದಲ್ಲಿ ಆರೋಪಿಯನ್ನು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಸದ್ರಿ ದಿನ ಆರೋಪಿ ಸದ್ರಿ ಕಾರಿನಲ್ಲಿ ಇಲ್ಲದೆ ಅದು ಆತನ ವಶದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದ್ರಿ ದಿನ ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ಸೃಷ್ಟಿಸಿದ ಕಾರಣ ಪಂಚನಾಮೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**